## ಕನ್ನಡ ನಿರ್ಲಕ್ಷ್ಯ

82ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ರಾಯಚೂರಿನಲ್ಲಿ ಅತ್ಯಂತ ವಿಜೃಂಭಣೆಯಿಂದ ಜರುಗಿತು. ನಾಡು– ನುಡಿ, ಸಂಸ್ಕೃತಿಗಳ ಬಗೆಗಿನ ವಿಷಯಗಳ ಚಿಂತನ–ಮಂಥನ ಗೋಷ್ಠಿಗಳಲ್ಲಿ ನಡೆಯಿತು. ಕಾರ್ಯಕ್ರಮದ ವರದಿಗಳನ್ನೂ ಕನ್ನಡ ದಿನಪತ್ರಿಕೆಗಳಲ್ಲಿ ಓದಿ ನಾವು ತಿಳಿದುಕೊಳ್ಳಬೇಕಾಯಿತು. ಆದರೆ ಇಂತಹದ್ದೊಂದು ನುಡಿ ಜಾತ್ರೆಯ ಕಾರ್ಯಕ್ರಮಗಳನ್ನು ಯಾವ ಕನ್ನಡ ವಾಹಿನಿಗಳೂ ನೇರ ಪ್ರಸಾರ ಮಾಡಲಿಲ್ಲ. ಸಮ್ಮೇಳನಕ್ಕೆ ಹೋಗಲು ಸಾಧ್ಯವಾಗದ ನಮ್ಮಂತಹ ಸಾವಿರಾರು ಜನಕ್ಕೆ ಇದರಿಂದ ನಿರಾಶೆಯಾಯಿತು. ಕೊನೆಗೆ ಕಾರ್ಯಕ್ರಮಗಳ ಸಂಕ್ಷಿಪ್ತ ದೃಶ್ಯ ರೂಪಗಳನ್ನಾದರೂ ಪ್ರಸಾರ ಮಾಡಲಿಲ್ಲ.

ಕೆಲವರ ಮದುವೆಯನ್ನು ರಾಷ್ಟ್ರೀಯ ಮಹತ್ವದ ಘಟನೆ ಎಂಬಂತೆ ಕನ್ನಡ ವಾಹಿನಿಗಳು ಪೈಪೋಟಿಯ ಮೇಲೆ ನೇರ ಪ್ರಸಾರ ಮಾಡಿದವು. ಇದರಿಂದ ಜನಸಾಮಾನ್ಯರಾದ ನಮಗೆ ಇವರ ಸಂದೇಶವೇನು? ಕನ್ನಡ ನಾಡು– ನುಡಿ, ಸಂಸ್ಕೃತಿಯ ಬಗೆಗಿನ ಇವರ ಬದ್ಧತೆ ಇದೇನಾ? ಜನ ಸಾಮಾನ್ಯರಾದ ನಮ್ಮ ಅಭಿರುಚಿಯನ್ನು ದೃಶ್ಯ ಮಾಧ್ಯಮಗಳು ತಿದ್ದಬೇಕೇ ವಿನಾ ದಾರಿ ತಪ್ಪಿಸುವುದಲ್ಲ.

–ಡಿ.ದೊಡ್ಡ ಲಿಂಗೇಗೌಡ, ಕೊಳ್ಳೇಗಾಲ

## ಬೇರೆ ಗಾಯಕರೂ ಬರಲಿ

ಝೀ ವಾಹಿನಿಯಲ್ಲಿ ಪ್ರಸಾರವಾಗುವ ಸರಿಗಮಪ ಸೀಸನ್–12 ಉತ್ತಮವಾಗಿ ಮೂಡಿಬರುತ್ತಿದ್ದು ಮಕ್ಕಳ ಗಾಯನ ಪ್ರತಿಭೆ, ಅವರ ಗಾಯನದ ಬಗೆಗೆ ಸಲಹೆ, ಮೆಚ್ಚುಗೆ ನೀಡುವ ಮೂವರು ತೀರ್ಪುಗಾರರು, (ವಿಜಯ ಪ್ರಕಾಶ್, ಅರ್ಜುನ್ ಜನ್ಯ, ರಾಜೇಶ್ ಕೃಷ್ಣನ್) ಹಾಗೂ ಅಂಕಗಳನ್ನು ನೀಡುವ ಜ್ಯೂರಿ ಅವರಿಂದ ಶೇಕಡಾವಾರು ಅಂಕ ಪಡೆವ ಮಕ್ಕಳು ತಮ್ಮ ಗಾಯನವನ್ನು ಮತ್ತಷ್ಟು ಉತ್ತಮಪಡಿಸಿಕೊಳ್ಳಲು ಸಹಕಾರಿಯಾಗಿದೆ. ಜ್ಯೂರಿ ಮೆಂಬರ್‌ಗಳು ಪ್ರತಿ ಸಂಚಿಕೆಯಲ್ಲಿ ಇರುವವರೇ ಇರುವುದಕ್ಕಿಂತ ಬೇರೆ ಗಾಯಕ/ಗಾಯಕಿಯರು ಬರಲಿ. ದಿನಾಂಕ 10, 11ರ ಸಂಚಿಕೆಯಲ್ಲಿ ಸೀಸನ್ 10 ರಲ್ಲಿ ಹಾಡಿದ ಮಕ್ಕಳು ಸೀಸನ್–12ರ ಮಕ್ಕಳೊಡನೆ ಹಾಡಿದ್ದು ತುಂಬ ಚೆನ್ನಾಗಿದ್ದು. ಸೀಸನ್ –10ರ ಮಕ್ಕಳನ್ನು ಮತ್ತೆ ನೋಡುವ, ಅವರ ಹಾಡು ಕೇಳುವ ಅವಕಾಶ ಲಭಿಸಿದ್ದು ಸಂತಸ ನೀಡಿತು.

–ವಿಭಾ ಮುರಳೀಧರ್, ತುಮಕೂರು

ವಾರದ ಪತ್ರ

## ಕನ್ನಡ ಮರೆತ ಕನ್ನಡ ವಾಹಿನಿಗಳು

ಕನ್ನಡಿಗರ ಹಬ್ಬವಾದ ಸಾಹಿತ್ಯ ಸಮ್ಮೇಳನ ಅದ್ದೂರಿಯಿಂದ ರಾಯಚೂರಲ್ಲಿ ಮೂರು ದಿನ ವಿಜೃಂಭಿಸಿತ್ತು. ವಿವಿಧ ಗೋಷ್ಠಿಗಳಲ್ಲಿ ವಿಚಾರಪೂರ್ಣ ಸಂವಾದ ಚರ್ಚೆ ನಡೆದವು. ಇದೆಲ್ಲ ವರ್ಷಕ್ಕೆ ಒಂದು ಸಲ ನಡೆಯುವ ಅಪರೂಪದ ಕನ್ನಡಿಗರ ಕಾರ್ಯಕ್ರಮ. ಅಲ್ಲಿ ಸೇರಿದವರು ಲಕ್ಷವಾದರೆ ಆ ಒಂದು ಅಪೂರ್ವ ಸಮ್ಮೇಳನವನ್ನು ಮನೆಯಲ್ಲೇ ಕುಳಿತು ನೋಡಲು ಆರು ಕೋಟಿ ಕನ್ನಡಿಗರು ಕುತೂಹಲದಿಂದ ಕಾದಿರುವುದನ್ನು ನಮ್ಮಲ್ಲಿ ಇರುವ ಇಪ್ಪತ್ತಕ್ಕೂ ಹೆಚ್ಚು ವಾಹಿನಿಗಳು ಗಮನಿಸದೆ ಯಥಾಪ್ರಕಾರ ಜ್ಯೋತಿಷ, ವಾಸ್ತು ಎಂದು ಏಕತಾನದ ಕಾರ್ಯಕ್ರಮಗಳಿಗೆ ಜೋತು ಬಿದ್ದು ಪ್ರಸಾರ ಮಾಡಿದ್ದು ವಿಷಾದಕರ. ಕನ್ನಡ ವಾಹಿನಿಗಳ ಮಾಲೀಕರು ಯಾವ ಭಾಷೆಯವರೇ ಇರಲಿ ತಮ್ಮ ವ್ಯವಹಾರದ ಕೇಂದ್ರವೇ ಕನ್ನಡ ಎಂದು ಗೊತ್ತಿಲ್ಲವೇ?ಇದೇ ವಾಹಿನಿಗಳು ತಮಿಳು ನಾಡಿನ ವಿಧಿವಶರಾದ ಮುಖ್ಯಮಂತ್ರಿಗಳ ಅರೋಗ್ಯದ ವಿಷಯವನ್ನು ಒಂದು ದಿನವೆಲ್ಲಾ ಕ್ಷಣ ಕ್ಷಣ ಬಿತ್ತರಿಸಿದವು. ಮಾರನೆಯ ದಿನದ ಅಂತಿಮ ಯಾತ್ರೆಯ ದಿನವಂತೂ ಅದಕ್ಕೇ ಮೀಸಲಾಗಿತ್ತು. ಇಲ್ಲಿ ತೋರಿಸಿದ ಬದ್ಧತೆಯನ್ನು ಕನ್ನಡ ಸಾಹಿತ್ಯ ಸಮ್ಮೇಳನದ ಕಾರ್ಯಕ್ರಮವನ್ನು ಬಿತ್ತರಿಸುವಲ್ಲಿಯೂ ತೋರಿಸಿ ತಮ್ಮ ಕನ್ನಡದ ಬಗ್ಗೆ ಇರುವ ಗೌರವ ಪ್ರೀತಿ ತೋರಿಸದೆ ಹೋಗಿದ್ದು ವಿಷಾದಕರ. ತಮಿಳು ನಾಡಿನಲ್ಲಿ ಇಂತಹ ನಿರ್ಲಕ್ಷ್ಯ ಅಲ್ಲಿಯ ಭಾಷೆ ಸಂಸ್ಕೃತಿಯ ಬಗ್ಗೆ ತೋರಿಸಿದ್ದರೆ ಜನರ ಆಕ್ರೋಶ ತಿಳಿದಿರುತ್ತಿತ್ತು. ಸಹನಾಗುಣವನ್ನು ಇಷ್ಟು ಕಡೆಗಣಿಸಬಾರದು

–ಸತ್ಯಬೋಧ, ಬೆಂಗಳೂರು

## ಪಾಕ ಪಾಠ

ಸ್ಟಾರ್ ಸುವರ್ಣ ವಾಹಿನಿಯಲ್ಲಿ ಮಧ್ಯಾಹ್ನ 12.30ಕ್ಕೆ ಪ್ರಸಾರವಾಗುವ 'ಪಾಕಶಾಲೆ' ಕಾರ್ಯಕ್ರಮವನ್ನು ವೀಕ್ಷಿಸುವುದು ಹಿತವೆನಿಸುತ್ತದೆ. ಇದರಲ್ಲಿ ಗೌರಿ ಸುಬ್ರಹ್ಮಣ್ಯ ಅವರು ನಡೆಸಿಕೊಡುವ ಆರೋಗ್ಯಕರ ಅಡುಗೆಗಳು ಅತ್ಯಂತ ರುಚಿಕರವೂ ಕೂಡಾ. 'ಆರೋಗ್ಯ ಫ್ಯಾಕ್ಟರ್' ಎಂದು ಕರೆಯುವ ಇದರಲ್ಲಿ ನಮ್ಮ ಸುತ್ತಮುತ್ತಲೂ ಸುಲಭದಲ್ಲಿ ಸಿಗುವ ಎಲೆ, ಹೂವು, ಕಾಯಿ, ಹಣ್ಣು ಇತ್ಯಾದಿ ಬಳಸಿ ಮಾಡುವ ಸರಳ ಅಡುಗೆಗಳು ಬಹಳ ಉಪಯುಕ್ತ. ವೀಕ್ಷಕರು ಕೇಳುವ ಆರೋಗ್ಯ ಸಮಸ್ಯೆಯ ಪ್ರಶ್ನೆಗಳಿಗೆ ಸುಲಭ ಪರಿಹಾರ ಸೂಚಿಸುತ್ತಿರುವುದು ಅತ್ಯಂತ ಶ್ಲಾಘನೀಯ. ಪ್ರಶ್ನೆಗಳನ್ನು ಸಂಗ್ರಹಿಸಿ ಪ್ರಕಟಿಸಿದರೆ ಇನ್ನೂ ಉಪಯುಕ್ತ.

–ಸ್ವರಾಜ್ಯ ಲಕ್ಷ್ಮೀ, ಪ್ರಾಣೇಶ್‌ರಾವ್, ಹೊಸಪೇಟೆ

## ಇದು ಸಂಪ್ರದಾಯವೇ?

ಕಲರ್ಸ್‌ನ 'ಮನೆ ದೇವ್ರು'ನಲ್ಲಿ ಗಂಡಸರು ಮನೆಯಲ್ಲಿ ನಿಂತೋ ಕುಳಿತೋ ಮಾತನಾಡುತ್ತಿದ್ದಾಗ ಅಲ್ಲಿ ಹೆಂಗಸರಿರಬಾರದು. ಅವರು ಯಾವಾಗಲೂ ಅಡುಗೆಮನೆಯಲ್ಲಿರಬೇಕು. ಈ ಮನೆಯ ಗಂಡಸರು ಯಾರು ಏನೇ ಹೇಳಿದರೂ ಎದುರಾಡದೆ ಸರಿ ಎನ್ನಬೇಕು. ಇದು ಮನೆಯ ಹೆಂಗಸರು ಪಾಲಿಸಬೇಕಾದ ಸಂಪ್ರದಾಯ.

ಮಾತೆತ್ತಿದರೆ ಮನೆಯ 'ಸಂಪ್ರದಾಯ'. ಸಂಪ್ರದಾಯವೆಂದರೆ ಯಾರು ಎಷ್ಟು ಬೇಕಾದರೂ ಕುಡಿಯಬಹುದು. ಕಣ್ಣಿಗೆ ಕಂಡ ಹುಡುಗಿಯರನ್ನು ಕೆಡಿಸಬಹುದು, ಕೊಲ್ಲಿಸಲೂಬಹುದು, ಎಲ್ಲಕ್ಕಿಂತ ಮಿಗಿಲಾಗಿ ಬೆಳೆದು ನಿಂತ ಮನೆಯ ಹೆಣ್ಣುಮಕ್ಕಳನ್ನು ಹೊಡೆಯಬಹುದು, ವಿನಾಕಾರಣ ಶಾಲೆ, ಕಾಲೇಜು ಬಿಡಿಸಿ ಮನೆಯಲ್ಲೇ ಕೂಡಿಹಾಕಬಹುದು. ಇದು ಗಂಡಸರು ಅನುಸರಿಸುವ ಸಂಪ್ರದಾಯ. ದಯವಿಟ್ಟು ನಿರ್ಮಾಪಕರು, ನಿರ್ದೇಶಕರು ಸಂಪ್ರದಾಯ ಪದದ ಅರ್ಥವನ್ನು ತಿಳಿದುಕೊಂಡರೆ ಒಳ್ಳೆಯದು. ಈಗ ನಾವಿರುವುದು 21ನೇ ಶತಮಾನದಲ್ಲಿ.

–ಶಾಂತಾ ನಾಗರಾಜ್. ಕೆ., ಬೆಂಗಳೂರು

## ಟಿ.ವಿ.ಗೊಂದು ಸಲಾಮ್

ಟಿ.ವಿ. 9 ತನ್ನ 10 ನೇ ವರ್ಷದ ಸಂಭ್ರಮಾಚರಣೆಯನ್ನು ನಾಡಿನ ಬೆನ್ನೆಲುಬಾದ ರೈತರಿಗೆ ಅರ್ಪಣೆ ಮಾಡಿ ನಾಲ್ಕು ದಿನ ಒಂದು ವಿನೂತನವಾದ ಸುಂದರವಾದ ಕಾರ್ಯಕ್ರಮವನ್ನು ಬಿತ್ತರಿಸಿತು. ಸಹಸ್ರಾರು ರೈತರ ಉಪಸ್ಥಿತಿಯಲ್ಲಿ ಕೃಷಿ ಸಾಧನೆ ಮಾಡಿದ ರೈತ ಸಾಧಕರಿಗೆ ನಾಡಿನ ಗಣ್ಯರಿಂದ ಸನ್ಮಾನಿಸಿ ಒಂದು ಲಕ್ಷದ ಮೊತ್ತವನ್ನು ನೀಡಿ ಜೈ ಹೋ ರೈತ ಪ್ರಶಸ್ತಿ ನೀಡಿ ಗೌರವಿಸಿದ್ದು ನಿಜಕ್ಕೂ ಶ್ಲಾಘನೀಯ. ಬರಿ ಕಂಬನಿ, ಕಷ್ಟ ಕೋಟಲೆಗಳನ್ನು ಎದುರಿಸುತ್ತಿರುವ ರೈತರಿಗೆ ಗೌರವ ಸಲ್ಲಿಸಿದ ಈ ಕಾರ್ಯಕ್ರಮ ನಿಜವಾಗಲೂ ವೀಕ್ಷಕರ ಮನಸ್ಸನ್ನು ಸೆಳೆಯಿತು. ಅನ್ನದಾತ ರೈತನಿಗೆ ನೀಡಿದ ಗೌರವದಿಂದ ಟಿ.ವಿ. 9 ನ ಗೌರವ ಇನ್ನೂ ಹೆಚ್ಚಾಗಿದೆ. ಇಂತಹ ಕಾರ್ಯಕ್ರಮಗಳು ಪ್ರಸಾರವಾಗುತ್ತಿರಲಿ.

–ತಾರಾ ಹೆಗಡೆ, ಶಿರಸಿ

## ಮಕ್ಕಳಿಂದ ಇಂತಹ ಪಾತ್ರ!

ಈಗ ಪ್ರಸಾರವಾಗುತ್ತಿರುವ ಅನೇಕ ಧಾರಾವಾಹಿಗಳಲ್ಲಿ ಚಿಕ್ಕ ಹೆಣ್ಣುಮಕ್ಕಳಿಂದ ದ್ವೇಷ, ವಂಚನೆ, ಸೇಡು, ಬಾಲವಿಧವೆ, ದೆವ್ವ, ಭೂತ, ವಿಕೃತ ಮನಸ್ಸಿನವರ, ಬಾಲ ಕಾರ್ಮಿಕರ ಪಾತ್ರಗಳನ್ನು ಮಾಡಿಸುತ್ತಿದ್ದಾರೆ. ನೂರಾರು ವರ್ಷಗಳ ಹಿಂದಿನ ಅನಿಷ್ಠ ಪದ್ಧತಿಗಳು, ಮೂಢ ನಂಬಿಕೆಗಳು ದೂರವಾಗುತ್ತಿರುವ ಇಂದಿನ ದಿನಗಳಲ್ಲಿ ಇವುಗಳನ್ನೆಲ್ಲ ನೆನಪಿಸುವ ಅವಶ್ಯಕತೆಯಾದರೂ ಏನು? ಈ ಮಕ್ಕಳೆಲ್ಲ ಐದಾರು ವಯಸ್ಸಿನ ಆಸುಪಾಸಿನವರು. ಇಂತಹ ಧಾರಾವಾಹಿಗಳನ್ನು ವೀಕ್ಷಿಸುವ, ಪಾತ್ರ ಮಾಡುವ ಮಕ್ಕಳ ಮನಸ್ಸಿನ ಮೇಲೆ ಆಗಬಹುದಾದ ಪರಿಣಾಮದ ಬಗ್ಗೆ ಯೋಚಿಸಬೇಕಲ್ಲವೇ?

ಶ್ರೀನಾಥ್ ಕೊನೇಟಿ, ಬೆಂಗಳೂರು